ಬಂದವನನ್ನು ಕೋಣೆಯೊಳಗೆ ಕಾಲಿಡಗೊಡದೆ, "ನಂಗೆ ನಿದ್ದೆ ಬರುತ್ತೆ..." ಎಂದು ಬಾಗಿಲು ಮುಚ್ಚಿಕೊಂಡಿದ್ದಳು. ಬೆಳಗ್ಗೆ ಕಾಗೆ ಕರ್ರ್ ಎನುವುದಕ್ಕೂ ಮೊದಲೇ ಎದ್ದು ಫಸ್ಟ್ ಬಸ್ಸಿಗೆ...

"ಮುಗೀತು ಕಣೇ, ಇನ್ನ್ಯಾವತ್ತೂ ಅವಳು ಈ ಕಡೆ ಮಕ ಹಾಕಲ್ಲ. ಗೊತ್ತುಂಟು ನಂಗೆ..." ನಾಗರಾಜ ಗದ್ಗದಿತನಾಗಿ ಉಸುರಿದ್ದ. ಸಮಾಧಾನಿಸಿದ್ದಳು ಸೀತೆ,

"ಮಗೂನ ಕೊಡ್ತೀವಿ ಅಂತ ನಾವೇನು ಛಾಪಾಕಾಗದದ ಮೇಲೆ ಬರೆದು ಕೊಟ್ಟಿದ್ವಾ? ಅವಳು ಸಿಟ್ಟು ಮಾಡ್ಕಂಡು ಹೋದ್ರೆ ಅವಳ ಹಣೇಬರ."

"..."

"ನಿಮ್ದೂ ಅತಿಯಾಯ್ತು ಕಣ್ರೀ. 'ಮಾತು ಆಡಿದ್ರೆ ಹೋಯ್ತು, ಮುತ್ತು ಒಡೆದ್ರೆ ಹೋಯ್ತು' ಅಂತಾರೆ. ಕಾರ್ಯಕ್ಕೆ ಬರದ ಮಾತಾಡ್ಬೇಕಾದ್ರೆ ಹಿಂದೆ ಮುಂದೆ ಯೋಚ್ನೆ ಮಾಡೋದಲ್ವಾ?"

ಅಮೃತಾ, ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದಿದ್ದರೂ ಸ್ವಂತ ತಂಗಿಗಿಂತಾ ಮಿಗಿಲಾಗಿ ಬೆಳೆದ ಹುಡುಗಿ, ಅವಳ ಜೊತೆ ಮಾತಾಡಬೇಕಾದರೆ ಹಿಂದೆ ಮುಂದೆ ಯೋಚನೆ ಮಾಡಿ ಮಾತಾಡಬೇಕಾದ ಪ್ರಮೇಯ ಯಾವತ್ತೂ ಬಂದಿರಲಿಲ್ಲ. ಮೆದುಳಿಗೂ, ನಾಲಿಗೆಗೂ ಸಂಬಂಧ ಇರುತ್ತಿರಲಿಲ್ಲ. ಇಂತಾ ಅದೆಷ್ಟೋಂದು ಕಾರ್ಯಸಾಧ್ಯವಲ್ಲದ ತುಟಿ ಮೀರಿದ ಮಾತುಗಳನ್ನು ತಾವಿಬ್ಬರೂ ಆಡಿದ್ದೇವೆಯೋ, ಅಲ್ಲಲ್ಲೇ ಮರೆತಿದ್ದೇವೆಯೋ ಯಾರಿಗೆ ನೆನಪುಂಟು? ಸೀತೆ ನಿಷ್ಠುರವಾಗಿ ಹೇಳಿದ್ದಳು,

"ನೋಡಿ, ಅವಳಿಗೆ ಸಮಾಧಾನ ಆಗ್ಬೇಕು ಅಂದ್ರೆ ನಮ್ಮ ಕಂದನ್ನ ಕೈಯಾರೆ ಅವಳಿಗೆ ಕೊಡ್ಬೇಕು. ಯಾವುದು ಸರಿ ಅಂತ ನೀವೇ ಯೋಚ್ನೆ ಮಾಡಿ..." ಅಲ್ಲೇ ಬೆಳಕಿಗೆ ಉರುಡು ಹಾಕಿದ್ದ ಮಗುವನ್ನು ಎತ್ತಿ ತಂದು ಅವನ ತೊಡೆಯ ಮೇಲೆ ಮಲಗಿಸಿದ್ದಳು ಸೀತೆ. ಆಗಷ್ಟೇ ಮುಖ ನೋಡಿ ನಗಲು ಕಲಿತಿದ್ದ ಹಸುಕಂದ ಅಪ್ಪನ ಮುಖ ನೋಡಿ ಬೊಚ್ಚುಬಾಯಿ ಅರಳಿಸಿ ನಕ್ಕಿತ್ತು. ವಾತ್ಸಲ್ಯರಸದಲ್ಲಿ ತೋಯ್ದು ಹೋದ ನಾಗರಾಜ ತನ್ನ ಕಂದನನ್ನು ಎದೆಗಪ್ಪಿಕೊಂಡು ಅದರ ಮೃದುತ್ವವನ್ನು ಸುಖಿಸಿದ್ದ. ಕಣ್ಣುಗಳಿಂದ ದಳದಳ ನೀರಿಳಿಯುತ್ತಿತ್ತು. ಕಂಡರೂ ಕಾಣದಂತೆ ಸೀತೆ ಒಳಗೆ ಹೊರಟು ಹೋಗಿದ್ದಳು.

★★★

ಕೊಡ ಹಾಲಿಗೆ ಒಂದು ಹುಂಡು ಹುಳಿ ಬಿದ್ದಂತಾಯ್ತು. ಹಗೆತನ ಸಾಧಿಸುವುದು ಅಂದರೆ ಈ ಮಟ್ಟಿಗಾ? ಸಂಬಂಧಗಳು ಅಂದರೆ ಇಷ್ಟು ಹಗುರವಾಗಿರುತ್ತವೆಯಾ, ಒಲ್ಲದ ಒಂದು ಕ್ರಿಯೆಯಿಂದ, ಚುಚ್ಚುವ ಒಂದು ಮಾತಿನಿಂದ ಕುಸಿದು ನೆಲ ಕಚ್ಚುವಷ್ಟು? ಹಾಗಿದ್ದರೆ ಅಂತಾ ಸಂಬಂಧಕ್ಕೆ ಏನರ್ಥ? 'ಒಂದು ಮಾತು ಬಂತು, ಹೋಯ್ತು. ವಿಷಗಳಿಗೆ' ಎನ್ನುವ ವಾಸ್ತವ ಪ್ರಜ್ಞೆ ಸುಧಾರಿಸಿಕೊಂಡು ಹೋಗಬೇಕೆನ್ನುವವರಿಗೆ ಇರಬೇಡವೇ? ನಾಗರಾಜ ಸುಲಭಕ್ಕೆ ಸೋಲೊಪ್ಪಿಕೊಳ್ಳಲಿಲ್ಲ. 'ನಂದು ತಪ್ಪಾಯ್ತು ಕಣೇ, ನೀನು ತಪ್ಪು ತಿಳ್ಕೊಂಡಿ ಕಣೇ...' ಎಂದೇನೇನೋ ಮುಲಾಮು ಸವರಲು ಹಲವು ಸಲ ಅವಳಿಗೆ ಫೋನ್ ಮಾಡಿ, ಅವಳು ಕರೆ ಸ್ವೀಕರಿಸದೆ, "ಒಂದು ಹೆಜ್ಜೆ ನಾನೇ ಹೋಗಿಬರ್ಲೇನೇ? ಚಿಕ್ಕಿ, ಚಿಕ್ಕಪ್ಪನ್ನೂ ನೋಡಿದ ಹಾಗಾಗುತ್ತೆ" ಹೆಂಡತಿಯ ಸಲಹೆ ಕೇಳಿದ್ದ ನಾಗರಾಜ.

"ಮಕಕ್ಕೆ ಮಂಗಳಾರತಿ ಮಾಡಿಸ್ಕೋಬೇಕು ಅಂತಾದ್ರೆ ಹೋಗ್ಬನ್ನಿ. ನನ್ನ ಗಂಟೇನು ಹೋಗುತ್ತೆ?" ಖಾರವಾಗಿ ಪ್ರತಿಕ್ರಿಯಿಸಿದ್ದಳು ಸೀತೆ. ಇರಲಿ, ಕಾಲ ಎಲ್ಲಕ್ಕೂ ಮದ್ದರೆಯುತ್ತದೆ, ಕಡಿದ ಕೊಂಡಿ ಕೂಡುತ್ತದೆ, ತಂತು ಬೆಸೆಯುತ್ತದೆ ಎಂದು ನಾಗರಾಜ ಕನಸಿದ್ದೇ ಬಂತು. ಯಾವ ಪವಾಡವೂ ನಡೆಯಲಿಲ್ಲ. ದಾಯಾದಿಗಳು ಅಂದರೆ ಕೊನೆಗೂ ದಾಯಾದಿಗಳಾಗಿಯೇ ಬದುಕಬೇಕಾ, ಮನಸ್ಸು ಮುರಿಯಲು ಸಣ್ಣದೊಂದು ನೆಪ ಸಾಕಾಗುತ್ತದೆಯಾ ಎಂದು ಎಷ್ಟೋ ಸಲ ನಾಗರಾಜನಿಗೆ ಅನಿಸಿದ್ದಿತ್ತು. ತಾನು ಮನುಷ್ಯಸ್ವಭಾವವನ್ನು ಅರ್ಥೈಸಿಕೊಂಡಿದ್ದೇ ತಪ್ಪಾಗಿತ್ತಾ? ತನಗಿಲ್ಲದ ಪ್ರಾಪ್ತಿ ತನ್ನಣ್ಣನಿಗೆ ಲಭ್ಯವಾಗಿದೆಯೆಂದು ಅಮೃತಾ ಒಳಗೊಳಗೇ ಮತ್ಸರಿಸಿದ್ದಳೇ? ಅವಳು ಮಾತ್ರಾ ಅಲ್ಲ,